ಸರ್ಕಾರದಿಂದ ಬಾರದ "ಗೃಹಲಕ್ಷ್ಮೀ" ಹಣ..!!




ನೀವೂ ಮನೆ ಕೆಲಸದ್ದು ಎರಡು ತಿಂಗಳದ್ದು ಬಾಕಿ ಉಳಿಸ್ಕೊಂಡಿದೀರಲ್ಲ...!




(ಹುಚ್ಚಾಸ್ಪತ್ರೆಗೆ ವಿಸಿಟ್ ಮಾಡಲು ಆರೋಗ್ಯಮಂತ್ರಿಗಳು ಸಡನ್ನಾಗಿ ಬಂದರು) ಎಲ್ಲಾ ಹುಚ್ಚರು ಎದ್ದು ನಿಂತು ಅವರಿಗೆ ನಮಸ್ಕಾರ ಮಾಡಿದರು. ಆದರೆ ನಮ್ಮ ಜಗ್ಗ ಮಾತ್ರ ನಮಸ್ಕಾರ ಮಾಡಲಿಲ್ಲ

ಮಂತ್ರಿ: ಅವನು ಯಾಕೆ ನನಗೆ ನಮಸ್ಕಾರ ಮಾಡಲಿಲ್ಲ?

ಡಾಕ್ಟರ್: ಸಾರ್, ಅವನಿಗೆ ಮೊನ್ನೆಯಷ್ಟೆ ಹುಚ್ಚು ಬಿಟ್ಟಿದೆ, ಡಿಸ್ಚಾರ್ಜ್‌ಗೋಸ್ಕರ ಕಾಯ್ತಾ ಇದ್ದಾನೆ!

***

ಅಪ್ಪ: ಕೇಳೋ ಇಲ್ಲಿ... ನಿನ್ನಂಥ ಪೋಲಿ ಪಟಾಲಂಗೆ ಪಕ್ಕದ ಮನೆ ಲಕ್ಷ್ಮಿ ಖಂಡಿತಾ ಒಲಿಯುವುದಿಲ್ಲ, ಅದನ್ನ ಬಿಟ್ಟು ತೆಪ್ಪಗೆ ವಿದ್ಯಾಭ್ಯಾಸದ ಕಡೆ ಗಮನಕೊಡು.

ಮಗ: ಹೂಂ ಕಣಪ್ಪಾ ಅದು ಗೊತ್ತಾಗಿಯೇ ನಾನು ಎದುರು ಮನೆ ಸರಸ್ವತಿಯನ್ನು ಸಿನ್ಸಿಯರ್ ಆಗಿ ಲವ್ ಮಾಡ್ತಾ ಇರೋದು.

***

(ಸುಬ್ಬನ ಮಗ ಚಿಂಟು ಮಹಾ ತರಲೆ)

ಮೇಷ್ಟು: ನಿಮ್ಮ ಅಪ್ಪ ಯಾರು?

ಚಿಂಟು: ನಮ್ಮ ಅಮ್ಮನ ಗಂಡ.

ಮೇಷ್ಟು: ನಿಮ್ಮ ಅಮ್ಮ ಯಾರು?

ಚಿಂಟು: ನಮ್ಮ ಅಪ್ಪನ ಹೆಂಡತಿ.

ಮೇಷ್ಟು: ಒಹ್, ಸರಿ ಸರಿ ನಿಮ್ಮ ಅಪ್ಪ ಅಮ್ಮ ಯಾರು?

ಚಿಂಟು: ಅಯ್ಯೋ ಅಷ್ಟೂ ಗೊತ್ತಾಗಲ್ವಾ, ಅವರಿಬ್ಬರೂ ಗಂಡ ಹೆಂಡತಿ ಸಾರ್!

***

ಮನು: ಈ ಹೊಸ ಕಾರಿನಲ್ಲಿ ಒಂದು ಲೀಟರ್ ಪೆಟ್ರೋಲ್‌ನಲ್ಲಿ ಎಷ್ಟು ಕಿಲೋಮೀಟರ್ ಓಡಿಸ್ತೀಯ?

ತನು: ಐದು ಕಿಲೋಮೀಟರ್ ಓಡಿಸ್ತೀನಿ.

ಮನು: ಅಯ್ಯೋ ಅಷ್ಟೇನಾ? ಬರೀ ಐದು ಅಂದ್ರೆ ತುಂಬಾ ಮೋಸ ಬಿಡು.

ತನು: ಛೇ...ಛೇ... ಅದು ಹಾಗಲ್ಲ, ನಾನು ಐದು ಕಿಲೋಮೀಟರ್ ಓಡಿಸಿ ಆದಮೇಲೆ ನನ್ನ ಹೆಂಡತಿ ಹದಿನೈದು ಕಿಲೋಮೀಟರ್ ಓಡಿಸುತ್ತಾಳೆ.

***

ರಷ್ಯಾ ಬಿಟ್ಟು ವೆನಿಜುವೆಲಾದಿಂದ ಭಾರತ ತೈಲ ಖರೀದಿ: ಟ್ರಂಪ್ ಹೇಳಿಕೆ..!!




ಏ..ಮಂಗ್ಯಾ..ನಾವು ಎಲ್ಲಿಬೇಕಾದ್ರು "ಎಣ್ಣೆ ಖರೀದಿ" ಮಾಡಬಹುದು..!!

ಶಾಂತ: ಗಂಡ ಯಾವಾಗಲೂ ತಪ್ಪಾಗಿಯೇ ಇರುತ್ತಾನೆ.

ಪೀಟರ್: ಹೌದು ಕಣೇ ನೀನು ಹೇಳೋದು ಸರಿ

ಶಾಂತ: ಜಾಣಮರಿ ಈ ಸಲ ನೀವು ಖಂಡಿತಾ ಸರಿ ಕಣ್ರೀ.

***

ಗುಂಡನ ಮನೆ ಮುಂದೆ ಒಂದು ಬೋರ್ಡ್‌ನಲ್ಲಿ ಹೀಗೆ ಬರೆಯಲಾಗಿತ್ತು...

ಇಲ್ಲಿ ಪುಕ್ಕಟ್ಟೆ ಸಲಹೆಗಳು ಸಿಗುತ್ತವೆ, ಯಾಕೆಂದರೆ ನನಗೆ ಅವು ಉಪಯೋಗಕ್ಕೆ ಬರುತ್ತಿಲ್ಲ!

***

ನಾಣಿ: ನಿನ್ನ ಮಗಳ ಮದುವೆ ಮತ್ತೆ ಮುಂದಕ್ಕೆ ಹೋಯಿತಂತೆ?

ಗುಂಡ: ಎಲ್ಲಾ ನನ್ ಗ್ರಹಚಾರ, ನನ್ನ ಭಾವೀ ಅಳಿಯ ಹೈಕೋರ್ಟ್‌ನಲ್ಲಿ ಲಾಯರ್, ಹಿಯರಿಂಗ್ ಮುಂದಕ್ಕೆ ಹೋಗಿ ಹೋಗಿ ಅಭ್ಯಾಸ– ಅದೇ ರೀತಿ ನನ್ನ ಮಗಳ ಮದುವೆನೂ...

***

ಮೇಷ್ಟು: ಸೈಕ್ಲೋನ್ ಎಂದರೇನು?

ಪಿಂಟು: ಸೈಕಲ್ ಖರೀದಿ ಮಾಡಲು ಬ್ಯಾಂಕ್‌ನಿಂದ ಕೊಡುವ ಸಣ್ಣ ಲೋನ್ ಸೈಕ್ಲೋನ್.

***

ಮೇಷ್ಟು: ಅಷ್ಟೋತ್ತರ ಎಂದರೇನು?

ಚಿಂಟು: ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಮಾತ್ರ ಉತ್ತರ ಹೇಳೋದು.

ಮೇಷ್ಟು: ಮರಣೋತ್ತರ ಎಂದರೆ?

ಚಿಂಟು: ಉತ್ತರ ಬರೆಯುತ್ತಾ ಬರೆಯುತ್ತಾ ಮರಣ ಹೊಂದುವುದು.

***

ಆತ: ಇವ್ರು ಅದ್ಭುತ ಕಲಾವಿದರು. ಕೇವಲ ಅರ್ಧ ಗಂಟೇಲಿ ನಗುಮೊಗದ ಚಿತ್ರವನ್ನು ಅಳುವ ಮೊಗದ ಹಾಗೇ ಮಾಡಿಬಿಡುತ್ತಾರೆ.

ಈತ: ಅದೇನ್ ಮಹಾ ಬಿಡಯ್ಯಾ, ನನ್ ಹೆಂಡ್ತಿ ಕೇವಲ ಎರಡು ನಿಮಿಷದಲ್ಲಿ ಆ ಕೆಲಸ ಮಾಡಿ ಮುಗಿಸಿಬಿಡುತ್ತಾಳೆ.

***

ಗೀತ: ನಿಮ್ಮ ಮನೆಯಲ್ಲಿ ಯಾರನ್ನು ಕಂಡರೆ ಅತ್ಯಂತ ಪ್ರೀತಿ ಜಾಸ್ತಿ ?

ಸೀತ: ನನ್ನಣ್ಣ ಅಂದ್ರೆ ಪ್ರಾಣ, ಅಷ್ಟು ಪ್ರೀತಿ ಕಣೇ.

ಗೀತ: ಅಯ್ಯೋ ಎಂಥ ಪವಾಡ, ನನಗೂ ನಿನ್ನ ಅಣ್ಣನನ್ನು ಕಂಡರೆ ಬೆಟ್ಟದಷ್ಟು ಪ್ರೀತಿ ಕಣೇ!

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು